


ಗುಡಿಸಲೊಂದರಲ್ಲಿ ಕಂಡ ಈ ಬೀಸುಕಲ್ಲು ಮುಂದೆ 'ರಾಕ್ ಗಾರ್ಡನ್' ರೂಪುಗೊಳ್ಳಲು ಕಾರಣವಾಯಿತು

ದಾರಿಯುದ್ದಕ್ಕೂ ನೆಲಹಾಸುಗಳಾಗಿ ಮನಸೆಳೆಯುತ್ತವೆ. ಅವುಗಳನ್ನು ವಿಸ್ಮಯದಿಂದ ನೋಡುತ್ತ ಮುಂದೆ ಹೋಗುವ ಜತೆಗೇ, ಅಕ್ಕಪಕ್ಕ ಎದ್ದುನಿಂತ ಗೋಡೆಗಳನ್ನೊಮ್ಮೆ ಗಮನಿಸಿದೆ. ಏನೋ ವಿಶಿಷ್ಟ ಅನಿಸಿ ಹತ್ತಿರ ಹೋಗಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅವು ವಿದ್ಯುತ್ ಬಲ್ಬ್‌ಗಳ ಮುರಿದ ಹೋಲ್ಡರ್ ಆಗಿರಬೇಕೇ! ಚಾಂದ್ ಅವರ ಯೋಚನಾಲಹರಿ ಮೆಚ್ಚುತ್ತ, ಮಂಟಪವೊಂದರ ಒಳಗೆ ಹೋದಾಗ ತಂಪು ತಂಪು ಅನುಭವ. ಅಲ್ಲೂ ಕಂಡಿದ್ದು ಅದೇ: ಶಿಲಾಮಂಟಪ ಹಾಗೂ ಕಂಬಗಳನ್ನು ಮುರಿದ ಇಟ್ಟಿಗೆಗಳಿಂದ ಮಾಡಲಾಗಿತ್ತು!

ಶಿಲೋದ್ಯಾನದ ಪ್ರಮುಖ ಆಕರ್ಷಣೆಗಳಲ್ಲಿ ಎರಡು ಜಲಪಾತಗಳೂ ಸೇರಿವೆ. ಸಾಕಷ್ಟು ಎತ್ತರದಿಂದ ಸುರಿಯುವ ನೀರು, ಮಳೆಕೊಯ್ಲು ವ್ಯವಸ್ಥೆ ಮೂಲಕ ಸಂಗ್ರಹಿಸಿದ್ದಂತೆ! ಜಲಪಾತದ ಕೆಳಗೆ ಬೆಳೆದ ಬೃಹತ್ ಮರಗಳ ಬೇರುಗಳು ದಿಗ್ಭ್ರಮೆ ಮೂಡಿಸುತ್ತವೆ. ಆದರೆ ಅವು ಸಿಮೆಂಟ್‌ನಿಂದ ತಯಾರಾಗಿರುವಂಥವು. ಜಲಪಾತದ ವೈಭವವನ್ನು ಕಣ್ತುಂಬಿಕೊಳ್ಳಲು ಎದುರಿನ ಬ್ರಹತ್ ಮರದ ದಿಮ್ಮಿಯ ಸೇತುವೆ ಹತ್ತಿದರೂ ಕಾಲಿಗೆ ಗಡಸು ಸ್ಪರ್ಶ. ದಿಮ್ಮಿಗಳೂ ಸಿಮೆಂಟ್‌ನವೇ. ಜಲಪಾತದ ಪಕ್ಕದ ಕಿರುದಾರಿಯಲ್ಲಿ ಮೇಲೇರುತ್ತ ಹೋದಂತೆ, ಎದುರಿನ ಇಳಿಜಾರಿನಲ್ಲಿ ನೀರು ಜುಳುಜುಳು ಹರಿಯುತ್ತ ಕಾಲಿಗೆ ಕಚಗುಳಿ ಕೊಡುತ್ತದೆ.

ಕೆಲವೊಂದು ಸಲ ಗೊಂದಲ ಉಂಟಾಗುವಂತೆ ಮಾರ್ಗವನ್ನು ರೂಪಿಸಲಾಗಿದೆ. ಆದರೆ ಗಾಬರಿಯಾಗಬೇಕಿಲ್ಲ; ಹೇಗೆ ಹೋದರೂ ಒಂದು ಕಡೆ ಮಾತ್ರ ಮಾರ್ಗ ಇರುವುದರಿಂದ ದಾರಿತಪ್ಪುವ ಆತಂಕ ಇಲ್ಲ.

ಟ್ರೆಕ್‌ಗಟ್ಟಲೇ ಟೈಲ್ಸ್‌ಗಳ ತುಂಡು ತುಣುಕುಗಳನ್ನು ರಾಶಿ ತಂದು ಹಳದಿ ಹಾಗೂ ಬಿಳಿ ಕುದುರೆಗಳನ್ನು ರಚಿಸಲಾಗಿದೆ. ಅವು ನೂರಾರು ಸಂಖ್ಯೆಯಲ್ಲಿ! ಹತ್ತಿರ ಹೋಗಿ ಗಮನಿಸಿದರಷ್ಟೇ ಅವುಗಳ 'ಅಸಲಿ' ಚಹರೆ ಬೆಳಕಿಗೆ ಬರುತ್ತದೆ. ಮುಂದೆ ಸಾಗಿದರೆ ಆರೆಂಟು ಅಡಿ ಎತ್ತರದ ಮನುಷ್ಯರು ವಿವಿಧ ಭಂಗಿಗಳಲ್ಲಿ ನಿಂತಿದ್ದಾರೆ. ನೂರಾರು ಮಯೂರಗಳು ಇನ್ನೇನು ಹಾರಲು ಸಿದ್ಧ ಎಂಬ ಭಂಗಿಯಲ್ಲಿ ನಿಂತಿವೆ. ಅವುಗಳಿಗೆ ಬಳಸಿರುವುದು ಬಳೆಯ ಗಾಜಿನ ತುಂಡುಗಳು. ಅವುಗಳ ಮುಂದೆ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವ ಪ್ರವಾಸಿಗರ ದಂಡೂ ದೊಡ್ಡದೇ.

### ಗೊಂಬೆ ಮ್ಯೂಸಿಯಂ

ಮೂರನೇ ಹಂತದಲ್ಲಿ ಬಣ್ಣಬಣ್ಣದ ಬೊಂಬೆಗಳ ಮ್ಯೂಸಿಯಂ (ಡಾಲ್ ಮ್ಯೂಸಿಯಂ) ಇದೆ. ಅದಂತೂ ಬಲು ಮನಮೋಹಕ. ಸುರಂಗದಾಕಾರದಲ್ಲಿ ರಚಿಸಲಾದ ಆ ಮ್ಯೂಸಿಯಂ ನೋಡಲು ಕನಿಷ್ಠ ಎರಡು ತಾಸು ಬೇಕು. ಹಳ್ಳಿಗಾಡಿನ ಬದುಕುಬವಣೆ, ಸಾಂಪ್ರದಾಯಿಕ ಸಮಾರಂಭಗಳ ಚಿತ್ರಣ ಅಲ್ಲಿ ಕಾಣಸಿಗುತ್ತದೆ.

ವರ್ಣರಂಜಿತ ಆದರೆ ಮಂದ ದೀಪಗಳನ್ನು ಅಳವಡಿಸಲಾದ ಆ ಭಾಗದಲ್ಲಿ ಕೃಷಿ ಬದುಕು, ರೈತರು, ಗೃಹಿಣಿಯರು, ವೃದ್ಧರ ಹರಟೆ, ಮಕ್ಕಳ ಆಟೋಟ, ಮದುವೆ ವೈಭವ, ಸಾಧುಗಳ ಪ್ರವಚನ ಆಲಿಸುವಿಕೆಯ ಜತೆಗೆ ವಿರಾಮದ ಚಟುವಟಿಕೆಗಳ ಸುಮಾರು ಇನ್ನೂರು ಗೊಂಬೆಗಳನ್ನು ಸೃಷ್ಟಿಸಲಾಗಿದೆ. ಅವುಗಳಿಗೆಲ್ಲ ಬಳಸಿರುವುದು ಹಳೆಯ ಬಟ್ಟೆಗಳನ್ನೇ ಎಂಬುದು ವಿಶೇಷ.

ಗೊಂಬೆ ಮ್ಯೂಸಿಯಂ ಪಕ್ಕದಲ್ಲಿ ಲಘು ಉಪಾಹಾರಕ್ಕೆಂದು ರೆಸ್ಟೋರೆಂಟ್ ಇದೆ. ಇನ್ನೊಂದು ಬದಿಯಲ್ಲಿ 'ರಾಕ್ ಗಾರ್ಡನ್' ವಿವರಗಳು ಹಾಗೂ ಪ್ರಮುಖ ಘಟನಾವಳಿಗಳ ಅಪರೂಪದ ಛಾಯಾಚಿತ್ರ ಪ್ರದರ್ಶನವಿದೆ. ಇನ್ನೇನು, ಗುಜರಿಗೆ ಹಾಕಲಿಕ್ಕಷ್ಟೇ ಯೋಗ್ಯವಾಗಿದೆ ಎಂಬಂಥ ಟ್ರಕ್ ಅನ್ನು ಒಂದು ಮೂಲೆಯಲ್ಲಿ ನಿಲ್ಲಿಸಲಾಗಿದೆ. ಇಲ್ಲೇಕು ಇದು ಇದೆಯೆಂದರೆ, ನೆಕ್ ಚಾಂದ್ ಅವರು ಇದರಲ್ಲೇ ಸಾಮಗ್ರಿಗಳನ್ನು ತರುತ್ತಿದ್ದರು ಎಂಬ ಮಾಹಿತಿ ಸಿಕ್ಕು ಖುಷಿಯಾಯಿತು!

ಶಿಲೋದ್ಯಾನದ ಕೊನೆಯ ಭಾಗ, ಮನರಂಜನೆ ಪಾರ್ಕ್. ಉಯ್ಯಾಲೆ, ಕಲ್ಲಿನ ಬೆಂಚುಗಳು, ಸಾಂಸ್ಕೃತಿಕ ಚಟುವಟಿಕೆ ನಡೆಸಲು ರಂಗಮಂಟಪ ಅಲ್ಲಿವೆ.

ಕಾಡಿನಲ್ಲಿ ಸ್ಥಾವರ ನಿರ್ಮಿಸಿ, ಅದರಿಂದ ಪುನರ್ಬಳಕೆ ಪಾಠ ಹೇಳಿದ ನೆಕ್ ಚಾಂದ್ ಅವರಿಗೆ ದೇಶ ವಿದೇಶಗಳಿಂದ ಆಹ್ವಾನಗಳು ಬಂದವು. ತಮ್ಮ ಅನುಭವಗಳನ್ನು ಆಸಕ್ತರ ಜತೆ ಹಂಚಿಕೊಳ್ಳುತ್ತಿದ್ದ ಅವರಲ್ಲಿ ಪ್ರಕೃತಿಯ ಕಡೆಗೆ ಅನನ್ಯ ಆರಾಧನಾ ಭಾವವಿತ್ತು. ಚಾಂದ್ ಅವರ ಸಾಧನೆಗೆ 1984ರಲ್ಲಿ ಪದ್ಮಶ್ರೀ ಪುರಸ್ಕಾರ ಪ್ರಾಪ್ತವಾಯಿತು. ಮನುಷ್ಯನ ಕ್ರಿಯಾಶೀಲತೆ ಹಾಗೂ ಚಿಂತನೆಯ ಅಸೀಮ ಬುದ್ಧಿವಂತಿಕೆಗೆ ಸಾಕ್ಷಿಯಾಗಿರುವ ರಾಕ್ ಗಾರ್ಡನ್‌ಗೆ ದಿನನಿತ್ಯ ಐದು ಸಾವಿರ ಜನ ಭೇಟಿ ನೀಡುತ್ತಾರಂತೆ.

ಏನೇನೂ ಉಪಯೋಗವಿಲ್ಲ ಎಂದು ಬಿಸಾಡಲು ಸಿದ್ಧವಾಗಿದ್ದ ಪದಾರ್ಥಗಳನ್ನು ತಂದು ಮನುಷ್ಯ, ನವಿಲು, ಕುದುರೆ, ಜಿರಾಫೆ, ಮಂಗ, ಆನೆ ಮತ್ತು ಚಿತ್ರವಿಚಿತ್ರ ಮೂರ್ತಿಗಳನ್ನು ರೂಪಿಸಿದ ಕೃತಿಕಾರ ನೆಕ್ ಚಾಂದ್. 'ದಿನನಿತ್ಯದ ಬದುಕಿನಲ್ಲಿ ಬಳಸಿದ ಬಳಿಕ, ಎಲ್ಲೆಂದರಲ್ಲಿ ವಿವೇಚನೆಯಿಲ್ಲದೇ ಎಸೆಯುವ ಸಾಮಗ್ರಿಗಳಿಗೆ ಲೆಕ್ಕವಿಲ್ಲ. ಅದರಿಂದ ಏಕಕಾಲಕ್ಕೆ ಪರಿಸರದ ಮೇಲೆ ಒತ್ತಡವೂ, ತ್ಯಾಜ್ಯ ವಿಲೇವಾರಿ ತಲೆನೋವೂ ಉದ್ಭವಿಸುತ್ತವೆ. ತುಸು ಯೋಚಿಸಿದರೆ, ಅವುಗಳನ್ನು ಪುನರ್ಬಳಕೆ ಮಾಡಿಕೊಳ್ಳುವ ಹತ್ತಾರು ದಾರಿ ಗೋಚರಿಸುತ್ತವೆ. ಮುಖ್ಯವಾಗಿ, ಯೋಚಿಸುವ ಆಸಕ್ತಿ ಇರಬೇಕಷ್ಟೇ' ಎಂಬ ನೆಕ್ ಚಾಂದ್ ನುಡಿಯಲ್ಲಿ ಹಲವು ಅರ್ಥಗಳಿವೆ.

ಪ್ರತಿಕ್ರಿಯಿಸಿ: feedback@sudha.co.in


ನಿರಂತರ ಸದೃಢ ಆರೋಗ್ಯಕ್ಕಾಗಿ

SDM™ AYURVEDA PHARMACY

ಅಷ್ಟವರ್ಗಯುಕ್ತ

ಚ್ಯವನಪ್ರಾಶ ಲೇಹ






ಹಸಿ ನೆಲ್ಲಿಕಾಯಿ ಯಿಂದಲೇ ತಯಾರಿಸಿದೆ.

- ರೋಗ ನಿರೋಧಕ ಶಕ್ತಿ ಹೆಚ್ಚಿಸಲು
- ವೃದ್ಧಾಪ್ಯದ ಆರೋಗ್ಯ ಸಮಸ್ಯೆ
- ಮಕ್ಕಳ ಬೆಳವಣಿಗೆ

SDM

ಆಯುಷ್ ಕ್ವಾಥ

ಮನೆಯಲ್ಲಿ ಇರಲೇಬೇಕಾದ ಆಯ್ದ ಮೂಲಿಕೆಗಳ ಕಷಾಯ

- ಶೀತ, ನೆಗಡಿ, ಗಂಟಲು ಹಾಗೂ ಕಫ ಬಾಧೆ.
- ಶರೀರದ ಚಯಾಪಚಯ ಪ್ರಕ್ರಿಯೆ ಸುಧಾರಣೆ.
- ಎಲ್ಲಾ ವಯಸ್ಸಿನವರಿಗೆ ಉಪಯುಕ್ತ.




ತಯಾರಕರು

SDM ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ

ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ

ISO 9001:2015 & GMP CERTIFIED

Email: sdmaph@sdmayurvedacollegeudupi.in
Customer Care: +91 8970977513

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.